## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನ ಆಯವ್ಯಯದ ಭಾಷಣದಲ್ಲಿ ವಸತಿ ಶಾಲೆಗಳು ಇಲ್ಲದ ಹೋಬಳಿಗಳಿಗೆ ಹಂತ ಹಂತವಾಗಿ ಹಿಂದುಳಿದ ವರ್ಗದ ವಸತಿ ಶಾಲೆಗಳನ್ನು ಮಂಜೂರು ಮಾಡಲು ಪ್ರಸ್ತಾಪಿಸಿರುವ ಬಗ್ಗೆ.

ಓದಲಾಗಿದೆ: ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಇವರ ಪತ್ರ ಸಂಖ್ಯೆ:ಕವಶಿಸಸ/ ಯೋ-1/ ಸಿಆರ್(6)/ 2016-17. ದಿನಾಂಕ:12.05.2016 ಹಾಗೂ ಪತ್ರ ಸಂಖ್ಯೆ:ಕವಶಿಸಸ/ ಯೋ-1/ ಸಿಆರ್(6) 52/ 2016-17. ದಿನಾಂಕ:07.10.2016

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು, ಇವರು 2016-17ನೇ ಸಾಲಿನ ಆಯವ್ಯಯ ಭಾಷಣದಲ್ಲಿ "ವಸತಿ ಶಾಲೆಗಳು ಇಲ್ಲದೇ ಇರುವ ಹೋಬಳಿಗಳಿಗೆ 155 ಹಿಂದುಳಿದ ವರ್ಗಗಳ ವಸತಿ ಶಾಲೆಗಳನ್ನು ಹಂತ ಹಂತವಾಗಿ ಪ್ರಾರಂಭಿಸಲಾಗುವುದೆಂದು ಘೋಷಿಸಲಾಗಿದೆ. ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ ಹೊಸ ವಸತಿ ಶಾಲೆಗಳ ಪ್ರಾರಂಭಕ್ಕೆ 2016-17ನೇ ಸಾಲಿನಲ್ಲಿ ರೂ.775.00/- ಲಕ್ಷಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2225-03-277-2-62(ಯೋಜನೆ) ರಡಿ ಒದಗಿಸಿ, ಪ್ರಸ್ತಾಪಿಸಿದ ಈ ಕೆಳಕಂಡ 08 ಹೊಸ ವಸತಿ ಶಾಲೆಗಳನ್ನು ಹಾಗೂ ಪ್ರತಿ ವಸತಿ ಶಾಲೆಗೆ 25 ಹುದ್ದೆಗಳನ್ನು ಸೃಜಿಸಿ ಮಂಜೂರಾತಿ ಆದೇಶ ನೀಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| ಕ್ರ.ಸಂ | ಜಿಲ್ಲೆಯ ಹೆಸರು | ತಾಲ್ಲೂಕು | ಕ್ರ.ಸಂ | ಹೋಬಳಿಯ ಹೆಸರು | ಹಿಂದುಳಿದ ವರ್ಗದ ವಸತಿ ಶಾಲೆ/ಗ್ರಾಮ |
|---|---|---|---|---|---|
| 1. | ಶಿವಮೊಗ್ಗ | ಸಾಗರ | 1 | ಕರೂರು | ಮೊ.ದೇ.ವ.ಶಾಲೆ, ತುಮರಿ |
| | | ಹೊಸನಗರ | 2 | ಕಸಬಾ | ಮೊ.ದೇ.ವ.ಶಾಲೆ, ಗೇರುಪುರ. |
| 2. | ತುಮಕೂರು | ಪಾವಗಡ | 3 | ವೈ.ಎನ್.ಹೊಸಕೋಟೆ | ಮೊ.ದೇ.ವ.ಶಾಲೆ, |
| | | ತುರುವೆಕೆರೆ | 4 | ಮಾಯಾಸಂದ್ರ | ಮೊ.ದೇ.ವ.ಶಾಲೆ, ಮಣಿಚೆಂಡೂರು |
| 3 | ಮೈಸೂರು | ಕೆ.ಆರ್.ನಗರ | 5 | ಮಿರ್ಲೆ | ಮೊ.ದೇ.ವ.ಶಾಲೆ, ಕುಪ್ಪಹಳ್ಳಿ. |
| 4. | ಬೆಳಗಾವಿ | ಗೋಕಾಕ್ | 6 | ಕಸಬಾ | ಮೊ.ದೇ.ವ.ಶಾಲೆ, ತುಮ್ಮರಗುದ್ದಿ. |
| 5. | ರಾಯಚೂರು | ಮಾನ್ವಿ | 7 | ಕಲ್ಲೂರು | ಮೊ.ದೇ.ವ.ಶಾಲೆ, |
| 6. | ಬಾಗಲಕೋಟೆ | ಹುನಗುಂದ | 8 | ಅಮೀನಗಡ | ಮೊ.ದೇ.ವ.ಶಾಲೆ, |

ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಗಿನಂತೆ ಆದೇಶಿಸಿದೆ.

### ಸರ್ಕಾರದ ಆದೇಶ ಸಂಖ್ಯೆ: ಸಕಇ 116 ಮೊದೇಶಾ 2016,
### ಬೆಂಗಳೂರು ದಿನಾಂಕ:27-02-2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2016-17ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ, ತುಮಕೂರು ಜಿಲ್ಲೆಯ ಪಾವಗಡ, ತುರುವೆಕೆರೆ, ಮೈಸೂರು ಜಿಲ್ಲೆಯ ಕೆ.ಆರ್.ನಗರ, ಬೆಳಗಾವಿ ಜಿಲ್ಲೆಯ ಗೋಕಾಕ್, ರಾಯಚೂರು ಜಿಲ್ಲೆಯ

ಮಾನ್ವಿ ಹಾಗೂ ಬಾಗಲಕೋಟೆ ಜಿಲ್ಲೆಯ ಹುನಗುಂದ ಈ ಎಂಟು ಸ್ಥಳಗಳಲ್ಲಿ ಹಿಂದುಳಿದ ವರ್ಗಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ "ಅನುಬಂಧದಲ್ಲಿ" ನೀಡಿರುವ ಹುದ್ದೆಗಳನ್ನು ಮಂಜೂರು ಮಾಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 736 ವೆಚ್ಚ-3/2016. ದಿನಾಂಕ:10-02-2017ರಲ್ಲಿ ನೀಡಿರುವ ಸಮಹತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

(ಬಿ.ಎನ್.ಸುಮತಿ) 2/3/17
ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು,(ಎ ಮತ್ತು ಇ)(ಲೆಕ್ಕ ಪರಿಶೋಧನೆ-1) (ಲೆಕ್ಕಪರಿಶೋಧನೆ-2) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ,(ಸಚಿವ ಸಂಪುಟ ವ್ಯವಹಾರಗಳು) ವಿಧಾನಸೌಧ.
3. ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.
4. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು.
6. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು
7. ಜಿಲ್ಲಾಧಿಕಾರಿಗಳು, ಶಿವಮೊಗ್ಗ, ತುಮಕೂರು, ಮೈಸೂರು, ಬೆಳಗಾವಿ, ರಾಯಚೂರು ಮತ್ತು ಬಾಗಲಕೋಟೆ ಜಿಲ್ಲೆ.
8. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಜಿಲ್ಲಾ ಪಂಚಾಯತ್, ಶಿವಮೊಗ್ಗ, ತುಮಕೂರು, ಮೈಸೂರು, ಬೆಳಗಾವಿ, ರಾಯಚೂರು ಮತ್ತು ಬಾಗಲಕೋಟೆ ಜಿಲ್ಲೆ.

(7 ಮತ್ತು 8: ಕ.ವ.ಶಿ.ಸಂ.ಸಂಘ ಇವರ ಮುಖಾಂತರ)

9. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು, ಶಿವಮೊಗ್ಗ, ತುಮಕೂರು, ಮೈಸೂರು, ಬೆಳಗಾವಿ, ರಾಯಚೂರು ಮತ್ತು ಬಾಗಲಕೋಟೆ ಜಿಲ್ಲೆ.
10. ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ.
11. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-3&9) ವಿಕಾಸಸೌಧ, ಬೆಂಗಳೂರು.
13. ಸರ್ಕಾರದ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ.
14. ಸರ್ಕಾರದ ಉಪ ಕಾರ್ಯದರ್ಶಿ-1, ಸಮಾಜ ಕಲ್ಯಾಣ ಇಲಾಖೆ, ವಿಕಾಸಸೌಧ.

# ಅನುಬಂಧ

| ಕ್ರ.ಸಂ | ಹುದ್ದೆಗಳ ವಿವರ | 01ನೇ ವರ್ಷ | 02ನೇ ವರ್ಷ | 03ನೇ ವರ್ಷ | 04ನೇ ವರ್ಷ | 05ನೇ ವರ್ಷ | ನೇಮಕಾತಿ ವಿಧಾನ |
|---|---|---|---|---|---|---|---|
| 1 | ಪ್ರಾಂಶುಪಾಲರು | 1 | – | – | – | – | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 2 | ಕನ್ನಡ ಭಾಷಾ ಶಿಕ್ಷಕರು. | 1 | – | – | – | – | |
| 3 | ಹಿಂದಿ ಶಿಕ್ಷಕರು | 1 | – | – | – | – | |
| 4 | ಆಂಗ್ಲ ಭಾಷಾ ಶಿಕ್ಷಕರು | 1 | – | – | – | – | |
| 5 | ಗಣಿತ(ಪಿಸಿಎಂಬಿ) | 1 | – | – | – | – | |
| 6 | ವಿಜ್ಞಾನ(ಸಿಬಿಝೆಡ್) | – | 1 | – | – | – | |
| 7 | ಸಮಾಜ ವಿಜ್ಞಾನ | – | – | 1 | – | – | |
| 8 | ದೈಹಿಕ ಶಿಕ್ಷಕರು | – | 1 | – | – | – | |
| 9 | ಗಣಕ ಯಂತ್ರ ಶಿಕ್ಷಕರು | – | – | 1 | – | – | |
| 10 | ಕ್ರಾಫ್ಟ್ ಶಿಕ್ಷಕರು | – | – | 1 | – | – | |
| 11 | ಮಹಿಳಾ ಶುಶ್ರೂಷಕಿ | 1 | – | – | – | – | ಹೊರಗುತ್ತಿಗೆ ಆಧಾರದ ಮೇಲೆ |
| 12 | ಗಣಕಯಂತ್ರದ ಜ್ಞಾನವುಳ್ಳ ಪ್ರಥಮ ದರ್ಜೆ ಸಹಾಯಕರು | – | 1 | – | – | – | ವೃಂದ ಮತ್ತು ನೇಮಕಾತಿ ನಿಯಮಗಳನ್ವಯ |
| 13 | ವಸತಿ ನಿಲಯ ಮೇಲ್ವಿಚಾರಕರು | 1 | – | – | – | – | |
| 14 | ಲ್ಯಾಬ್ ಅಟೆಂಡರ್ | – | – | – | – | – | ಹೊರಗುತ್ತಿಗೆ ಆಧಾರದ ಮೇಲೆ |
| 15 | ಅಡುಗೆಯವರು | 1 | 1 | – | – | – | |
| 16 | ಅಡುಗೆ ಸಹಾಯಕರು | 1 | – | – | – | – | |
| 17 | ಗ್ರೂಪ್–ಡಿ | – | – | – | 1 | – | |
| 18 | ಕಾವಲುಗಾರರು | 1 | – | – | – | – | |
| 19 | ಸ್ವಚ್ಛತಾ ಸಿಬ್ಬಂದಿ | – | 1 | – | 1 | – | |
| ಒಟ್ಟು | | 10 | 5 | 3 | 2 | – | |